ಅಧ್ಯಕ್ಷರು:- ನೀವು ನೀವು ಮಾತನಾಡಿಕೊಂಡರೆ ಹೇಗೆ?

(ಗೊಂದಲ)

ಶ್ರೀ ಕರಿಯಣ್ಣ:- ಅದನ್ನು ತೆಗೆಯಿರಿ ಹೇಳುತ್ತಿದ್ದಾರೆ. ನಾವು ಎಲ್ಲಿ ಹೋಗಬೇಕು?

ಶ್ರೀ ಎಸ್.ಎಸ್.ಪಾಟೀಲ್:- ಸರ್ವಜ್ಞನ ವಚನವೆಂದರೆ, ಆಡದೆ ಮಾಡುವವನು ರೂಢಿಯೊಳಗುತ್ತಮನು, ಆಡಿ ಮಾಡುವವನು ಮಧ್ಯಮನು, ಆಡಿಯೂ ಮಾಡದವನು ಅಧಮನು ಸರ್ವಜ್ಞ. ಮಾನ್ಯ ಮುಖ್ಯಮಂತ್ರಿಗಳು ಅಧಮರಾಗುವುದಿಲ್ಲವೆಂಬ ಖಾತ್ರಿ ನನಗಿದೆ. ಹೇಳಿದ್ದನು ಮಾಡಿ ಉತ್ತಮರಾಗಿರಿ ಎಂದು ಅವರನ್ನು ಕೇಳಿಕೊಂಡು, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಮತ್ತೊಮ್ಮೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚುನಾವಣಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ಚುನಾವಣಾ ಪ್ರಸ್ತಾವಗಳನ್ನು ಈ ಸದನದ ಮುಂದಿಡುವುದಕ್ಕೆ ಬಯಸುತ್ತೇನೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 265 (1)ರ ಅನುಸಾರ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 268(1)ರ ಅನುಸಾರ ಅಂದಾಜುಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 271ರ ಅನುಸಾರ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿದಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 272ರ ಹಕ್ಕುಬಾಧ್ಯತಾ ಸಮಿತಿಗೆ 9 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 277ರ ಅನುಸಾರ ಶಾಸನ ರಚನಾ ಸಮಿತಿಗೆ 12 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 281ರ ಅನುಸಾರ ಸರ್ಕಾರಿ ಭರವಸೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 283ರ ಅನುಸಾರ ಖಾಸಗಿ ಸದಸ್ಯರ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಗೆ 10 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 288ರ ಅನುಸಾರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ 12 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 286ರ ಅನುಸಾರ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಸಮಿತಿಗೆ 13 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 370(2)ರ ಅನುಸಾರ ವಸತಿ ಸೌಕರ್ಯಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸುವುದು.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ 21(1) (14)ನೇಕಲಂ ಮೇರೆಗೆ ಅವಶ್ಯಪಡಿಸರುವಂತೆ ಏಕ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದನುಸಾರ ಬೆಂಗಳೂರು ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವುದು.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯದ 21(1)(14)ನೇ ಕಲಂನ ಮೇರೆಗೆ ಅವಶ್ಯಪಡಿಸಿರುವಂತೆ ಮತದ ಮೂಲಕ ಅನುಪಾತದನುಸಾರವಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವುದು.

ಕುವೆಂಪು ವಿಶ್ವವಿದ್ಯಾನಿಲಯಕ್ಕೆ 5 ಜನ ಸದಸ್ಯರನ್ನು ಚುನಾಯಿಸುವುದು.

ಮೈಸೂರು ವಿಶ್ವವಿದ್ಯಾನಿಲದ ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವುದು. ಕನ್ನಡ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸಭೆಯು ಸೂಚಿಸುವುದು.

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಗಿದೆ. ಬೇರೆ ದಿನಾಂಕ ಯಾವುದೆಂಬುದರ ಬಗ್ಗೆ ನಂತರ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ಈಗಾಗಲೇ ಹೇಳಿರುವ ಪ್ರಕಾರ, ನಾಳೆ ಉಪಸಭಾಧ್ಯಕ್ಷರ ಚುನಾವಣೆ ನಂತರ, ಮಾತನಾಡುವವರಾದ ಮೇಲೆ ಪುನ: ನವೆಂಬರ್ 11 ಮತ್ತು 12ನೇ ತಾರೀಖು ಸಭೆ ಸೇರುತ್ತದೆ. ಅಂದು ಮಾತನಾಡುವವರಾದ ನಂತರ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ (ಮುಂದು)

ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಾಲ್):- ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರು, 21ನೇ ಶತಮಾನಕ್ಕೆ ತೆರಳುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕಿರುವ ದೂರದೃಷ್ಟಿ, ಮುನ್ನೋಟಗಳನ್ನು ಕುರಿತು ವಿವರವಾಗಿ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ವಂದಾನಾ ರ್ನಿಣಯಕ್ಕೆ ನಾನು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಒಂದೆಡೆ ಸ್ಪಷ್ಟ ಬಹುಮತ ನೀಡಿರುವ ನೀಡಿರುವ ರಾಜ್ಯದ ಮತದಾದರರು ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ನವ ಕರ್ನಾಟಕ ನಿರ್ಮಾಣಕ್ಕೆ ಆದೇಶ ನೀಡಿದ್ದಾರೆ. ಆದರೆ, ಮತ್ತೊಂದೆಡೆ 24 ಪಕ್ಷಗಳ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ ಅಲ್ಲಿ ಸ್ಥಿರ ಸರ್ಕಾರ ನೀಡಬಲ್ಲದೇ ಎಂಬ ಗೊಂದಲ ಕೂಡ ರಾಜ್ಯ ಜನತೆಯ ಮನಸ್ಸಿನಲ್ಲಿ ಆತಂಕ ಉಂಟು ಮಾಡಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಕೇಂದ್ರಸರ್ಕಾರ ತನ್ನ ಪ್ರಮುಖ ವಿಚಾರಣಾ ಸಂಸ್ಥೆಯಾದ ಸಿ.ಬಿ.ಐ.ಅನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳುವುದರ ಕುರಿತು ವ್ಯಾಖ್ಯಾನ ಮಾಡಬೇಕಾಗಿತ್ತು, ಎಂಬುದು ನನ್ನ ಅನಿಸಿಕೆ, ಕೇವಲ ರಾಜಕೀಯ ಕಾರಣಗಳಿಗಾಗಿ ಸ್ವಾರ್ಥಕ್ಕಾಗಿ, ರಾಷ್ಟ್ರನಾಯಕ ††††† ಕುರಿತು ಸಲ್ಲಿಸಿರುವ ಚಾರ್ಜ್‌ಷೀಟಿನಲ್ಲಿ ಸೇರಿಸಿ, ಕೀಳು ರಾಜಕೀಯ ಮಾಡಿರುವುದನ್ನು